ವಿಜಯ ಕರ್ನಾಟಕ

# ಈಜು: ಜೈನ್ ವಿವಿಗೆ ಸಮಗ್ರ ಪ್ರಶಸ್ತಿ

■ ವಿಕ ಸುದ್ದಿಲೋಕ, ಬೆಂಗಳೂರು

ಬೆಂಗಳೂರಿನ ವಿವಿ ಪುರಂನ ಜೈನ್ ವಿವಿಯ ಮಹಿಳೆಯರ ಈಜು ತಂಡ ಕೋಲ್ಕೊತದಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ಅಂತರ ವಿವಿ ಈಜು ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಸಾಧನೆ ತೋರಿ ಟ್ರೋಫಿ ಗೆದ್ದುಕೊಂಡಿತು.

ಅ.3ರಿಂದ 7ರವರೆಗೆ ನಡೆದ ಚಾಂಪಿಯನ್‌ಷಿಪ್‌ನ ಮಹಿಳಾ ವಿಭಾಗದಲ್ಲಿ ಒಟ್ಟು 59 ಅಂಕ ಸಂಪಾದಿಸಿದ ಜೈನ್ ವಿವಿ ತಂಡ ಟ್ರೋಫಿ ಗೆದ್ದುಕೊಂಡಿತು. ಪುರುಷರ ವಿಭಾಗದಲ್ಲೂ (24 ಅಂಕ) ಉತ್ತಮ ಸಾಧನೆ ತೋರಿದ ತಂಡ ಒಟ್ಟಾರೆ 83 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಪುರುಷರ ವಿಭಾಗದಲ್ಲಿ 48 ಅತ್ಯಧಿಕ ಅಂಕ ಗಳಿಸಿದ ಪಂಜಾಬ್ ವಿವಿ ತಂಡ ಟ್ರೋಫಿ ಗೆದ್ದುಕೊಂಡಿತು. 33 ಅಂಕ ಸಂಪಾದಿಸಿದ ಬೆಂಗಳೂರು ವಿವಿ ತಂಡ ಮೊದಲ ರನ್ನರ್ ಅಪ್ ಸ್ಥಾನ ಗಿಟ್ಟಿಸಿದರೆ ಚೆನ್ನೈನ ಅಣ್ಣಾ ವಿವಿ ತಂಡ ಎರಡನೇ ರನ್ನರ್ ಅಪ್ ಸ್ಥಾನ ಸಂಪಾದಿಸಿತು.



ಕೋಲ್ಕೊತದಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ಅಂತರ ವಿವಿ ಈಜು ಚಾಂಪಿಯನ್‌ಷಿಪ್‌ನ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ 83 ಅಂಕಗಳೊಂದಿಗೆ ಸಮಗ್ರ ಚಾಂಪಿಯನ್ ಪಟ್ಟ ಗೆದ್ದ ಬೆಂಗಳೂರಿನ ವಿವಿಪುರಂನ ಜೈನ್ ವಿವಿ ಕಾಲೇಜು ತಂಡ ಟ್ರೋಫಿಯೊಂದಿಗೆ.